# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್‌ಸಿ. 68/2024

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಸಿದ್ದರಾಜು | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಸಿದ್ದಲಿಂಗನಾಯಕ | | **27.02.2025** |
| ವಯಸ್ಸು | ಃ **49** ವರ್ಷ | | |
| ವೃತ್ತಿ | ಃ ಕೂಲಿ ಕೆಲಸ | ಪ್ರಾ.ಸಾ. ಃ | **14** |
| ವಾಸಸ್ಥಳ | ಃ ಆಲತ್ತೂರು | ಚಾ.ಸಾ. ಃ | **20** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಪರಶಿವಪ್ಪ ಇವರ ಪರಿಚಯ ಇದೆ. ಕೋರ್ಟ್ ಮುಂದೆ ಇರುವ ಆರೋಪಿತರ ಪರಿಚಯ ಇಲ್ಲ. ಪರಶಿವಪ್ಪ ಇವರು ಅಂದಾಜು *1½* ವರ್ಷದ ಹಿಂದೆ ಮರಣಹೊಂದಿದ್ದಾರೆ. ನಾನು ಪರಶಿವಪ್ಪ ಇವರಿಂದ ಅವರ ಜಮೀನಿನಲ್ಲಿದ್ದ ಮರಗಳನ್ನು ಖರೀದಿ ಮಾಡಿದ್ದೆ. ನಾನು ಆ ಮರಗಳನ್ನು *4* ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದೆ. ಅವರು ಮರಣಹೊಂದುವ ಎರಡು ದಿನಗಳ ಹಿಂದೆ ನಾನು ಆ ಮರಗಳನ್ನು ಖರೀದಿ ಮಾಡಿದ್ದೆ. ಆ ಕಾಲಕ್ಕೆ ನಾನು ಅವರಿಗೆ *1,500/-* ಹಣವನ್ನು ಕೊಟ್ಟು ಮರಗಳನ್ನು ಕಟಿಂಗ್ ಮಾಡಿದ್ದೆ. ಇನ್ನೂ ಕೆಲವು ಮರ ಕಟ್ ಮಾಡುವುದು ಬಾಕಿ ಇತ್ತು. ಮುಂದಿನ ಜಮೀನಿನವರಿಗೆ ತಿರುಗಾಡಲು ದಾರಿ ಮಾಡಿಕೊಡಬೇಕು ಎನ್ನುವ ಕಾರಣಕ್ಕೆ ಆ ಮರಗಳನ್ನು ಕಡಿಸಿದ್ದರು. ಆ ಮರಗಳನ್ನು ಕೊಯ್ದು

ಹಾಕಲು ಮರುದಿನ ತುಂಬಿಕೊಂಡು ಹೋಗುವ ಸಲುವಾಗಿ ಬಿಟ್ಟಿದ್ದೆ ಆದರೆ ಮರುದಿನ ಅವರು ಮರಣಹೊಂದಿದ್ದರು.

<u>ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು</u>

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**